Indian Journal of History and Archaeology

ISSN (E):2582-225X
Vol-1 Issue 2, July- August 2019, Pp 41-54

# ಚಿಕ್ಕಬಳ್ಳಾಪುರ ಪ್ರದೇಶದ ಪಾಳೆಯಗಾರರ ಕಾಲದ ದೇವಾಲಯಗಳು ಮತ್ತು ಶಿಲ್ಪಕಲೆ; ಒಂದು ಅವಲೋಕನ

**ಜಿ.ಎಂ.ವೆಂಕಟೇಶ.**

**ಸಂಶೋಧನಾರ್ಥಿ**
ಇತಿಹಾಸ ವಿಭಾಗ.
ಬೆಂಗಳೂರು ವಿಶ್ವವಿದ್ಯಾಲಯ.ಬೆಂಗಳೂರು.
**ಉಪನ್ಯಾಸಕರು,**
ಇತಿಹಾಸ ವಿಭಾಗ,
ಜಿ.ಎಫ್.ಜಿ.ಕಾಲೇಜ್.ಶಿಡ್ಲಘಟ್ಟ.-
೫೬೨೧೦೫.ಮೋ;೯೬೬೩೧೯೪೩೬೮

ಅವಿಭಾಜಿತ ಕೋಲಾರ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲು ಗಂಗರು ,ನೊಳಂಬರು, ಹೊಯ್ಸಳರು, ವಿಜಯನಗರದ ಅರಸರು. ಚಿಕ್ಕಬಳ್ಳಾಪುರ, ಆವತಿ, ಸುಗುಟೂರು, ಗುಮ್ಮನಾಯಕನ ಪಾಳ್ಯದ ಪಾಳೆಯಗಾರರು ಆಡಳಿತ ಮಾಡಿದ್ದಾಗ ವಿವಿದ ಧರ್ಮಕ್ಕೆ ಸೇರಿದ ದೇವಾಲಯಗಳನ್ನು ನಿರ್ಮಾಣ ಮಾಡಿ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಅದ್ಬುತ ಕೊಡುಗೆ ನೀಡಿದ್ದಾರೆ. ಚಿಕ್ಕಬಳಾಪುರ ಪ್ರದೇಶದಲ್ಲಿ ಪಾಳೆಯಗಾರರ ಸಲ್ಲಿಸಿದ ಸೇವೆ ಅಲ್ಪವಾದರೂ ಅವರು ಸಹಾಸಪ್ರಿಯರಾಗಿ, ಉದ್ಯಮಶೀಲರಾಗಿ, ಧರ್ಮಶೀಲರೂ-ದೈವಭಕ್ತರೂ ಆದಂತೆ ನ್ಯಾಯಸಂದರಾಗಿ ರಾಜ್ಯಭಾರ ಮಾಡಿದವರು. ಇವರು ಬೆಟ್ಟಗುಡ್ಡಗಳನ್ನು ಕಡಿದು ಕೃಷಿಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಪ್ರಜಾಸಮುದಾಯ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇಂತಹವರ ಧರ್ಮನಿಷ್ಠೆ ಆಸದೃಶವಾದದ್ದು. ಪ್ರತಿಯೋಬ್ಬ ಪಾಳೆಯಗಾರನೂ ತನ್ನ ದುರ್ಗ ಅಥಾವ ಪರ್ವತ ಶಿಖರದಲ್ಲಿ ದೇಗುಲಗಳನ್ನು ಕಟ್ಟಿಸಿ ಅಲ್ಲಿ ಪೊಜಾಕಾರ್ಯಗಳು ನೆಡೆಯುವಂತೆ ವ್ಯವಸ್ಥೆ ಮಾಡುತ್ತಿದ್ದರು. ನಾಯಕ ಜನಾಂಗಕ್ಕೆ ಸೇರಿದ ಪಾಪನಾಯಕ. ಕದಿರೆಪ್ಪ ನಾಯಕ, ವಸಂತನಾಯಕ, ತಿಮ್ಮಪ್ಪನಾಯಕ ಮುಂತಾದವರು ದೇವಾಲಯಗಳ ಸಂರಕ್ಷಣೆಯ ಕಾರ್ಯದಲ್ಲಿ ಪ್ರಮುಖ ಪಾತ್ರವಹಿಸಿದ್ದರು(೧). ಅಲ್ಲದೆ ಸುಗುಟೂರಿನ

ತಮ್ಮೆಗೌಡ, ಆವತಿಯ ರಣಭೈರೆಗೌಡ. ಚಿಕ್ಕಬಳ್ಳಾಪುರ ಮಲ್ಲಬೈರೆಗೌಡ, ಹಾವಳಿ ಬೈರೆಗೌಡ ಮೂದಲಾದ ಪಾಳೆಗಾರರ ಕಲಾಭಿರುಚಿಯಿಂದ ಚಿಕ್ಕಬಳ್ಳಾಪುರನ ಪ್ರದೇಶಾಂತ ವಿಭಿನ್ನವಾದ ಗುಡಿಗೋಪುರಗಳು ಪ್ರಸರಿಸಿಕೊಂಡಿವೆ.

ದೇವಾಲಯಗಳು ಮಾನವನಿಗೆ ಪ್ರಕೃತಿ ಸೌಂದರ್ಯವನ್ನು ಅನುಭವಿಸಲು ಅವಕಾಶ ಮಾಡಿಕೊಡುತ್ತವೆ. ಸಾಮಾನ್ಯವಾಗಿ ದೇವಾಲಯಗಳೆಲ್ಲ ಗಹನವಾದ ಗಂಭೀರವಾದ ಅರಣ್ಯಗಳಲ್ಲಿ, ಉನ್ನತವಾದ ಪರ್ವತಗಳ ಮೇಲೆ, ಶಾಂತವಾಗಿ ನದಿಗಳ ದಡದಲ್ಲಿ, ಸುಂದರವಾದ ಸಂಗಮ ಸ್ಥಳಗಳಲ್ಲಿ ನಿರ್ಮಾಣವಾಗಿವೆ ಹಾಗು ಈ ಪ್ರದೇಶದಲ್ಲಿ ಶೈವ–ವೈಷ್ಣವ–ಶಾಕ್ತ ಪಂಥಗಳ ಸಮೀಲವನ್ನು ಕಾಣಬಹುದು. ನಂದಿಯ ಬೋಗನಂದೀಶ್ವರ, ಆವಣಿಯ ರಾಮಲಿಂಗೇಶ್ವರ, ಕೋಲಾರದ ಸೋಮೇಶ್ವರ ದೇವಾಲಯಗಳು .ಗೊಳೂರು ನಿಡುಮಾಡಿಮಠ, ಕಳವರದ ಪಾಪಘ್ನಿಮಠ ಇವು ಶೈವ ಧರ್ಮದ ಅತ್ಯುನ್ನತಿಗೆ ನಿರ್ದೇಶನಗಳು.ಕೋಲಾರದ ಕೋಲಾರಮ್ಮ, ಸೀತಿಯ ಭೈರವ ದೇವಾಲಯಗಳು ಶಾಕ್ತೋಪಾಸನೆ ಮಾದ್ಯಮಗಳಾಗಿವೆ. ಗಡಿದಂ ವೆಂಕಟರಮಣ ದೇವಾಲಯ.ಚಿಕ್ಕಬಳ್ಳಾಪುರ ಕೋಟೆಯ ಚೆನ್ನಕೇಶವ ದೇವಾಲಯ, ಅಲಂಬಗಿರಿ ವೆಂಕಟರಮಣ ದೇವಾಲಯ.ಕೈವಾರದ ಆದಿನಾರಾಯಣ ದೇವಾಲಯ, ತಲಕಾಲಯಬೆಟ್ಟದ ಲಕ್ಷೀವೆಂಕಟೇಶ್ವರ ದೇವಾಲಯ, ದೇವನಹಳ್ಳಿ ಹಾಗೂ ಆವತಿಯ ಚೆನ್ನಕೇಶ್ವರ ದೇವಾಲಯಗಳು ವೈಷ್ಣವ ಧರ್ಮಕ್ಕೆ ಉತ್ತಮ ನಿರ್ದೇಶನಗಳಾಗಿವೆ. ಅಲ್ಲದೆ ಆವತಿ ಕೆಂಪಮ್ಮಗುಡಿ, ಚಿಕ್ಕಬಳ್ಳಾಪುರದ ಕಣಿವೆ ವೀರ ದಿಮ್ಮಮ್ಮ ಗಳೊಂದಿಗೆ ಗ್ರಾಮದೇವತೆಯರ ದೇವಾಲಯಗಳು ನಿರ್ಮಾಣವಾಗಿ ಪಾಳೆಗಾರರ ಶಕ್ತಿದೇವತೆಗಳ ಆರಾಧನೆಗೆ ಹೆಚ್ಚಿನ ಪ್ರಶಸ್ತಿ ನೀಡಿರುವುದು ಗಮನಾರ್ಹವಾಗಿದೆ. ಅಲ್ಲದೆ ಪ್ರಭಾವಿ ವ್ಯಕ್ತಿಗಳು ಎಲ್ಲ ಧರ್ಮಗಳಿಗೂ ವಿಶೇಷ ಪ್ರೋತ್ಸಾಹವನ್ನಿತ್ತಿದ್ದಾರೆ.

**ಅಂಬಾಜಿದುರ್ಗದ ಶಿವಾಲಯ**; ದೇವಾಲಯದ ಪ್ರವೇಶದ್ವಾರದ ಇಕ್ಕಲೆಗಳಲ್ಲಿ ಪ್ರತೇಕವಾದ ಕಲ್ಲಿನ ಫಲಕಗಳ ಕೆಳಭಾಗದಲ್ಲಿ ದ್ವಾರಪಾಲಕರ ಉಬ್ಬುಶಿಲ್ಪಗಳನ್ನು. ಕೆತ್ತಲಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಇತರೆ ಭಾಗಗಳಿದ್ದುದು ಕಂಡುಬಂದರು ಈಗ ಕೇವಲ ಗರ್ಭಗುಡಿ ಮಾತ್ರ ಕಂಡುಬರುತ್ತದೆ. ಗರ್ಭಗೃಹದಲ್ಲಿ ಹೆಚ್ಚು ಎತ್ತರವಿಲ್ಲದ ಪಾಣಿಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ಗರ್ಭಗೃಹದಲ್ಲಿರುವ ಬಾಂದುಕಲ್ಲಿನ ಮೇಲೆ ನಾಗರಲಿಪಿಯ ಶಾಸನವಿದ್ದು, "ಲಕ್ಷ್ಮಿನಾರಾಯಣಾಯ ನಮಃ" ಎಂದು ಕೆತ್ತಲಾಗಿದೆ.ಬಹುಶ ಈ ದೇವಾಲಯವು ವೈಷ್ಣವ ದೇವಾಲಯ ವಾಗಿದ್ದಿತೇನೂ. ಗರ್ಭಗುಡಿಯ ಮುಂಭಾಗದಲ್ಲಿ ಒಂದು ಶಿಲಾಸ್ತಂಭವಿದೆ, ಸುಂದರವಾದ ನಂದಿಯ ಬಿಡಿಶಿಲ್ಪವಿದೆ.(೧ಬಿ)

**ಅಗಲಗುರ್ಕಿಯ ವೀರಭದ್ರ ದೇವಾಲಯ**; ಗರ್ಭಗೃಹದಲ್ಲಿರು ವೀರಭದ್ರನ ಪ್ರತಿಮೆ ನಾಲ್ಕು ಅಡಿ ಎತ್ತರವಿದ್ದು, ನಾಲ್ಕು ಕೈಗಳಲ್ಲಿ ಕತ್ತಿ, ಗುರಾಣಿ, ಬಿಲ್ಲು ಹಾಗೂ ಬಾಣಗಳನ್ನು ಹೊಂದಿದೆ.ಗರ್ಭಗೃಹದ ಮುಂಭಾಗದಲ್ಲಿರುವ ನವರಂಗದಲ್ಲಿ ನಂದಿಯ ಕಳಿತ ಭಂಗಿಯ ಶಿಲ್ಪವಿದೆ. ಸ್ಥಳೀಯವಾಗಿ ಬೊಲವೀರಯ್ಯ ಎಂದು ಕರೆಯಲಾಗುತ್ತದೆ.ನವರಂಗದ ಬಲಭಾಗದಲ್ಲಿ ಆಭರಣಗಳಿಂದ ಅಲಂಕೃತ ಕೆತ್ತನೆ ಇರುವ ಎರಡು ಕೈಗಳನ್ನು ಮುಗಿದಿರುವ ಹಾಗೂ ನಾಲ್ಲು ಅಡಿ ಎತ್ತರದ ಸೆಟ್ಟಪ್ಪ ಎಂಬ ಭಕ್ತನ ವಿಗ್ರಹವಿದೆ .ಈ ದೇವಾಲಯವನ್ನು ಈತನೇ ನಿರ್ಮಿಸಿದನೆಂದು ಪ್ರತೀತಿ ಇದೆ(೨)

**ಆಲಂಬಗಿರಿಯ ಶ್ರೀ ವೆಂಕಟರಮಣ ದೇವಾಲಯ;** ಇಲ್ಲಿನ ಕ್ರಿ.ಶ.೧೫೩೨ರ ಶಾಸನ ವಿಜಯನಗರದ ಅಚ್ಯುತರಾಯನ ಆಳ್ವಿಕೆಯ ಕಾಲದಲ್ಲಿ ಕೋಲಾಲ ಸೀಮೆಯ ಕೈವಾರ ಸ್ಥಳದ ಮಾಂಡಲಿಕನಾಗಿದ್ದ ತಿಮ್ಮನಾಯಕನು ಈ ದೇವಾಲಗೆ ಬಂಗಾರದ ನಾಣ್ಯಗಳನ್ನು ಮತ್ತು ಇತರೆ ದತ್ತಿಗಳನ್ನು ಗೌತಮಗೋತ್ರದ ತಿಮ್ಮಭಟ್ಟನ ಮಗ ಗಿರಿಭಟ್ಟನಿಗೆ ವಿವರವನ್ನು ತಿಳಿಸುತ್ತದೆ.(೩)..ಕ್ರಿ.ಶ.೧೬೮೫ರ ಮರಾಠದೊರೆ ಸಾಂಬಾಜಿಯ ಮಗ ಮಲುಕೋಜಿ ರಾಜನ ಕೊಂಡದ ಗ್ರಾಮವನ್ನು ಈ ದೇವಾಲಯಕ್ಕೆ ದತ್ತಿ ಬಿಟ್ಟ ವಿವರ ನೀಡಿದೆ(೪). ವಾಸ್ತವವಾಗಿ ಊರಿಗೊಂದು ಕೋಟೆ ಅಥಾವ ಅವರಣವಿರುದಲ್ಲವೆ ಹಾಗಯೇ ಆಲಂಬಗಿರಿಯೂ ಸಹಾ ಕೋಟೆಯನ್ನು ಹೊಂದಿದೆ. ಊರಿನ ಮುಂಭಾಗದಲ್ಲಿ ಪುಷ್ಕರಣಿ ಅದರ ದಡದಲ್ಲಿ ಆಜಿಜನೇಯ ದೇವಾಲಯ ಇದೆ. ಕೋಟೆಯ ಮದ್ಯೆದಲ್ಲಿ ವೆಂಕಟರಮಣ ದೇವಾಲಯವಿದೆ. ದೇವಾಲಯದ ನವರಂಗವು ವಿಶಾಲವಾಗಿದ್ದು, ಮಧ್ಯದಲ್ಲಿ ನಾಲ್ಕು ಚೌಕಾಕಾರದ ವಿಜಯನಗರ ಶೈಲಿ ಸ್ತಂಭಗಳಿವೆ.ಇದರ ಛಾವಣಿ ಯಾವುದೆ ಕೆತ್ತನೆಗಳಿಲ್ಲದೆ ಸಾದಾರಣವಾಗಿದೆ. ಗರ್ಭಗುಡಿಯ ಬಲಭಾಗದಲ್ಲಿ ಸಾಂದರ ಪ್ರದಕ್ಷಿಣಪಥ ಇದೆ.ನವರಂಗದ ಮುಂಭಾಗದಲ್ಲಿ ಆಯತಾಕಾರದ ಹಾಗು ವಿಶಾಲವಾದ ಮುಖಮಂಟಪವಿದ್ದು ಎಂಟು ಎತ್ತರವಾದ ಚೌಕಾಕಾರದ ಸ್ತಂಭಗಳಿವೆ. ದೇವಾಲಯದ ಹೊರಭಾಗದಲ್ಲಿ ಸುತ್ತಲೂ ಎತ್ತರವಾದ ಕೋಟೆಯ ಗೋಡೆಗಳ ಆಕಾರದ ಭದ್ರತಾ ಗೋಡೆಗಳಿಂದ ಕೂಡಿರುವ ವಿಶಾಲವಾದ ಒಳಪ್ರಕಾರವಿದೆ. ಗರ್ಭಗೃಹದ ಮೇಲ್ಭಾಗದಲ್ಲಿರುವ ಚೌಕಾಕಾರದ ವಿಜಯನಗರ ಶೈಲಿಯ ಶಿಖರಗಳನ್ನು ನವಿಕರಿಸಲಾಗಿದೆ, ಮುಖಮಂಟಪದ ಬಲಭಾಗದಲ್ಲಿ ಸಣ್ಣಕೊಠಡಿಗಳಿದ್ದು, ಒಂದರಲ್ಲಿ ಶ್ರೀವೈಷ್ಣವ ಆಳ್ವಾರಗಳ ವಿಗ್ರಹಗಳನ್ನು. ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಪೂರ್ವದಿಕ್ಕುನಲ್ಲಿರುವ ಪ್ರವೇಶದ್ವಾರವು ಎತ್ತರವಾಗಿದ್ದು, ವಿಜಯನಗರೋತ್ತರ ಶೈಲಿಯಲ್ಲಿ ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಾಣ ಮಾಡಲಾಗಿದೆ. ಈ ದ್ವಾರಬಂಧದ ಒಳಭಾಗದಲ್ಲಿ ಎರಡು ಕಲ್ಲಿನ ಉಬ್ಬು ಶಿಲ್ಪಗಳಿವೆ.ಬಲಭಾಗದಲ್ಲಿ ನರ್ತಕಿ ಶಿಲಾಕೃತಿಯಿದ್ದು ಅಕೆಯ ಕಾಲಿನಿಂದ ಮುಳ್ಳನ್ನು ತೆಗೆಯುವ ಒರ್ವ ಪುರುಷಶಿಲ್ಪವೂ ಇದೆ.ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮೀಯ

ಉಬ್ಬುಶಿಲ್ಪವಿದೆ.ಲಲಾಟದ ಎರಡು ಪಕ್ಕದಲ್ಲಿ ಗಂಡಭೇರುಂಡ ,ನರ್ತಿಸುತ್ತಿರುವ ಕೃಷ್ಣ, ಚಂದ್ರ,ಹನುಮಾಂತ, ಶರಭ,ನರಸಿಂಹ. ಹಿರಣ್ಯಕಶಿಪು ಮತ್ತು ಲಕ್ಷೀನರಸಿಂಹ ಶಿಲ್ಪಾಲಂಕಾರವಿದೆ.ದೇವಾಲಯದ ಪ್ರವೇಶ ದ್ವಾರದ ಬಲಭಾಗದಲ್ಲಿ ಸ್ತಂಭಗಳಿಂದ ಕೋಡಿರುವ ವಿಶಾಲವಾದ ಕಲ್ಯಾಣ ಮಂಟಪವಿದೆ.ಎಡಭಾಗದಲ್ಲಿ ಅಲವೇಲು ಮಂಗಮ್ಮ ಅಥವಾ ಲಕ್ಷೀದೇವಿಯ ಪ್ರತೇಕ ಕೊಠಡಿ ಇದೆ.

**ಎಲ್ಲೋಡು ಅಥವಾಕೂರ್ಮಗಿರಿ;** ಬಾಗೇಪಲ್ಲಿ ತಾಲ್ಲೂಕ ನಲ್ಲಿದೆ,ಇಲ್ಲಿ ಎತ್ತರವಾದ ಬೆಟ್ಟದ ಮೇಲೆ ಲಕ್ಷೀನಾರಾಯಣಸ್ವಾಮಿ ಗವಿ ಇದೆ,ಬೆಟ್ಟವನ್ನೇರಲು ಪಾಳೆಯಗಾರರ ಕಾಲದಲ್ಲಿ ಮೆಟ್ಟಲುಗಳನ್ನು ಹಾಕಲಾಗಿದೆ.(೫). **ಗುಡಿಬಂಡೆ ಕೋಟೆಯಲ್ಲಿನ ರಾಮೇಶ್ವರ ದೇವಾಲಯ;** ಇದು ವಿಜಯನಗರೋತ್ತರ ಶೈಲಿಯಲ್ಲಿ ನಿರ್ಮಿತವಾದೆ. ಗರ್ಭಗುಡಿ, ಅಂತರಾಳ ಮತ್ತು ಮುಖಮಂಟಪಗಳನ್ನು ಹೊಂದಿದ್ದು ಪೂರ್ವಾಭಿಮುಖವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವು ಸಾಧಾರಣವಾಗಿದೆ. ಮುಖಮಂಟಪದ ಛಾವಣಿಯಲ್ಲಿ ಕೆಳಮುಖವಾಗಿರುವ ಪದ್ಮಾಲಂಕಾರವಿದೆ. ಇಲ್ಲಿರುವ ಸ್ತಂಭಗಳ ಮೇಲೆ ಗಣೇಶ,ನವಿಲು, ನಂದಿ, ಮಂಗಗಳು, ನಾಗಬಂಧ ಮೊದಲಾದ ಉಬ್ಬು ಶಿಲ್ಪಗಳಿವೆ.ದೇವಾಲಯದ ಮುಂಭಾಗದಲ್ಲಿರುವ ಎರಡು ಚೌಕಾಕಾರದ ಸ್ತಂಬಗಳು ಆಕರ್ಷಣೀಯವಾಗಿವೆ. ಇವುಗಳ ಮೇಲ್ಭಾಗದಲ್ಲಿ ನಾಲ್ಕು ಮೂಲೆಗಳಲ್ಲಿ ಹಾರುತ್ತಿರುವ ಸಿಂಹಗಳಿವೆ.ಇದರ ಚೌಕಾಕಾರದ ಪೀಠದ ಮೇಲೆ ಸೂರ್ಯನು ರಥದ ಮೇಲೆ ಕುಳಿತ ಬಂಗಿ ,ಏಳು ಕುದುರೆಗಳ ಸುಂದರವಾದ ಶಿಲ್ಪವಿದೆ. ಜೊತೆಗೆ ನಂದಿ, ವೀರಭದ್ರ,ಬೇಡರ ಕಣಪ್ಪ ,ಕೀರ್ತಿ ಮೂರ್ತಿಗಳಿವೆ. ಊರಾಚೆ ಬಂಡೆಯ ಮೇಲಿರುವ ಆಹೋಬಲ ನರಸಿಂಹ ಸ್ವಾಮಿ ದೇವಾಲಯವು ಹದಿನೇಳು ಶತಮಾನದ ಲಕ್ಷಣಗಳು ಹೊಂದಿದೆ. ದಕ್ಷಣಾಭಿಮುಖವಾಗಿರುವ ಈ ದೇವಾಲಯವು ಗರ್ಭಗುಡಿ,ನವರಂಗವನ್ನು ಹೊಂದಿದೆ.ಗರ್ಭಗುಡಿಯ ಸುತ್ತಲೂ ಸಾಧಾರಣ ಪ್ರದಕ್ಷಣ ಪಥವಿದೆ.ಮೇಲ್ಭಾಗದಲ್ಲಿ ಹೆಚು ಎತ್ತರವಿಲ್ಲದ ವಿಜಯನಗರೋತ್ತರ ಶೈಲಿಯ ಶಿಖರವಿದೆ. ದೇವಾಲಯದ ಸನಿಹದಲ್ಲಿ ಎರಡು ನೀರಿನ ಪುಷ್ಕರಣಿಗಳಿವೆ(೬)

**ಗೂಳೂರು ಶ್ರಿಶೈಲ ನಿಡುಮಾಮಡಿ ಪೀಠ'.** ಇದರ ಆರ್ಧಮಂಟಪ ಮತ್ತು ಮುಖಮಂಟಪಗಳಲ್ಲಿ ಇರುವ ಚತುಷ್ಕೋನಾಕಾರದ ಸ್ತಂಭಗಳ ಮೇಲಿರುವ ಉಬ್ಬುಶಿಲ್ಪಗಳು ಆಕರ್ಷಕವಾಗಿವೆ. ಇವುಗಳ ಪೈಕಿ ಶ್ರೀಶೈಲ ಕ್ಷೇತ್ರಕ್ಕೆ ಸೇರಿದ ಜಗದ್ಗುರುಗಳ ಚಿತ್ರಗಳನು ಕೆತ್ತಿರುವುವರು. ಜಗದ್ಗುರು ಪಂಡಿತಾಚಾರ್ಯ ಮತ್ತು ಇತರೆ ಜಗದ್ಗುರು ಶಿಲ್ಪಗಳು ಪುರಾತನವಾದವು.ಬಲಗೈಯಲ್ಲಿ ತ್ರಿಶೂಲ,ಎಡಗೈಯಲ್ಲಿ ದಂಡ ನಿಲುವಂಗಿ ನೊಪುರಗಳನ್ನು ಧರಿಸಿರುವ ಮೂರ್ತಿಶಿಲ್ಪವು ಪುರಾತನವು.(೭)

**ದಾರಿನಾಯಕನ ಪಾಳ್ಯದ ಶ್ರೀವೆಂಕಟರಮಣ ದೇವಾಲಯ;** ವಿಜನಗರೋತ್ತರ ಶೈಲಿಯನ್ನು ಹೊಂದಿದ್ದು ವಿಶಾಲವಾದ ಒಳ ಮತ್ತು ಹೊರ ಪ್ರಾಕಾರವನ್ನುಹೊಂದಿದೆ.ದೇವಾಲಯದ ಹೊರಭಾಗದಲ್ಲಿ ನಾಲ್ಕಾರು ಕಲ್ಲಿನ ರಥಗಳಿವೆ. ದೇವಾಲಯದ ಪ್ರವೇಶ ದ್ವಾರ ಬಳಿ ಒಂದು ಚಿಕ್ಕದಾದ ರಂಗನಾಥಸ್ವಾಮಿ ದೇವಾಲಯವಿದೆ. ಇದರ ಗರ್ಭಗುಡಿಯಲ್ಲಿ ಮೂರಡಿ ಎತ್ತರ,ನಾಲ್ಕು ಅಡಿ ಅಗಲದ ಶೇಷಾಯನ ಶ್ರೀರಂಗನಾಥ ಹಾಗು ಶ್ರೀದೇವಿ–ಭೂದೇವಿಯರ ಕಿರುಶಿಲ್ಪಗಳನ್ನು ಹೊಂದಿದೆ..ವೆಂಕಟರಮಣ ದೇವಾಲಯವು ಗರ್ಭಗುಡಿ,ಅರ್ಧಮಂಟಪ ಹಾಗು ಮುಖಮಂಟಪವನ್ನು ಹೊಂದಿದೆ.ಗರ್ಭಗೃಹವು ಚೌರಾಸವಾಗಿದ್ದು ಶ್ರೀದೇವಿ ಮತ್ತು ಭೂದೇವಿಯರಿಂದ ಕೊಡಿರುವ ವೆಂಕಟರಮಣ ವಿಗ್ರಹ ಹೊಂದಿದೆ.ಈ ವಿಗ್ರಹವು ಚತುರ್ಭುಜಗಳಿಂದ ಹೊಂದಿದ್ದು ಶಂಖು, ಚಕ್ರ, ವರದ ಮತ್ತು ಕಟೀಹಸ್ತಗಳನ್ನು ಹೊಂದಿದೆ. ಮುಖಮಂಟಪದಲ್ಲಿ ವಿಷ್ಣು ಪುರಾಣಕ್ಕೆ ಸಂಬಂಧಿಸಿದ ಹಲವು ಉಬ್ಬು ಶಿಲ್ಪಗಳಿವೆ. ದೇವಾಲಯದ ಸುತ್ತಲು ಒಳಪ್ರಕಾರವಿದ್ದು ಪ್ರದಕ್ಷಣ ಪಥವನ್ನು ಹೊಂದಿದೆ. ದೇವಾಲಯದ ಸುತ್ತಲು ಚಿಕ್ಕ,ಚಿಕ್ಕ ಮಂಟಪಗಳಿವೆ.ಗರ್ಭಗುಡಿ ಮೇಲೆ ದ್ರಾವಿಡ ಶೈಲಿಯ ಶಿಖರವಿದೆ. ಮುಖಮಂಟಪದ ಛಾವಣಿಯಲ್ಲಿ ಭುವನೇಶ್ವರಿ ವಿಗ್ರಹವಿದ್ದು ಮಧ್ಯದಲ್ಲಿ ಕಲ್ಲಿನಿಂದ ಕೆತ್ತಲಾಗಿರುವ ಮೊಗ್ಗಿನ ಅಲಂಕಾರವಿದೆ.(೮)

**ತಲಕಾಯಲ ಬೆಟ್ಟ ವೆಂಕಟರಮಣ ಸ್ವಾಮಿ ದೇವಾಲಯ;** ಶಿಡ್ಲಘಟ್ಟ ಪಾಳೆಪಟ್ಟುವನ್ನು ನೋಡಿಕೊಳ್ಳುತ್ತಿದ್ದ ತಿಮ್ಮರಾಜು ಮತ್ತು ಬೊಮ್ಮರಾಜು ರವರು ಈ ದೇವಾಲಯವನ್ನು ನಿರ್ಮಾಣ ಮಾಡಿದರು ಎಂದುಸ್ಥಳೀಯರ ಹೇಳಿಕೆಗವೆ. ಇಲ್ಲಿನ ಬೆಟ್ಟದ ಬುಡದಲ್ಲಿ ವೆಂಕಟಾಪುರ ಎಂಬ ಹಳ್ಳಿಯಲ್ಲಿ ವಿಜಯನಗರೋತ್ತರ ಶೈಲಿಯ ಶ್ರೀ ವೆಂಕಟೇಶ್ವರ ದೇವಾಲಯ ನಿರ್ಮಾಣ ಮಾಡಲಾಗಿದೆ.ದೇವಾಲಯದ ಮುಂಭಾಗಲ್ಲಿರುವ ಕಲ್ಯಾಣವನ್ನು ಪಾಳೆಯಗಾರರ ಆಳ್ವಿಕೆಯಲ್ಲಿ ನಿರ್ಮಿಸಲಾಗಿದೆ.ದೇವಾಲಯವನ್ನು ಪ್ರವೇಶಿಸಲು ಪೂರ್ವ ಮತ್ತು ದಕ್ಷಿಣಕ್ಕೆ ಎರಡು ಪ್ರವೇಶ ದ್ವಾರಗಳಿವೆ. ಮುಖ್ಯದ್ವಾರದ ಎಡಬದಿಯ ಗೋಡೆಯಲ್ಲಿ ವರಹ,ಮತ್ಸ್ಯ, ಕೂರ್ಮ, ಚಂದ್ರ, ಹಾಗೂ ಸೂರ್ಯರ ಉಬ್ಬುಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ.ಪ್ರಧಾನವಾಗಿ ದೇವಾಲಯವು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವನ್ನು ಹೊಂದಿದೆ.ನರಸಿಂಹ, ವಾಮನ,ಪರುರಾಮ, ಕೋದಂಡರಾಮ ಮೊದಲಾದ ಅಲಂಕೃತ ಉಬ್ಬುಶಿಲ್ಪಗಳಿವೆ. ನವರಂಗದ ಪಕ್ಕದಲ್ಲಿ ಕೊಠಡಿಯಲ್ಲಿ ಶ್ರೀ ಪದ್ಮಾವತಿಯ ಶಿಲಾವಿಗ್ರಹ ವಿದೆ.ಗರ್ಭಗೃಹವು ಚೌರಸವಾಗಿದ್ದು ಒಳಗೆ ಗರುಡ ಪೀಠದ ಮೇಲೆಅಸ್ಪಷ್ಟವಾದ ಮೂರ್ತಿಇದ್ದು ಅದನ್ನೇ ವೆಂಕಟೇಶ ಎಂದು ಕರೆಯಲಾದೆ.ಇದರ ಹಿಂದೆ ಸ್ವಲ್ಪ ಎತ್ತರದಲ್ಲಿ ವೆಂಕಟೇಶನ ಶ್ರೀದೇವಿ–ಭೂದೇವಿ ಸಮೇತನಾದ ವಿಗ್ರಹ ವಿದೆ.(೯)

**ನಂದಿ ದುರ್ಗದ ಯೋಗನಂದೀಶ್ವರ ದೇವಾಲಯ;** ಚೋಳರ ಕಾಲದ ದ್ರಾವಿಡ ಶೈಲಿಯಲ್ಲಿದೆ.ಗರ್ಭಗೃಹದ ಪ್ರವೇಶವು ಹಿತ್ತಾಳೆಯ ತಗಡನ್ನು ಹೊದಿಸಿರುವ ಬಾಗಿಲನ್ನು ಹೊಂದಿದ್ದು ಇಕ್ಕಗಳಲ್ಲಿ ಎತ್ತರವಾದ ದ್ವಾರ ಪಾಲಕರನ್ನು ಹೊಂದಿದೆ. ಈ ದ್ವಾರಪಾಲಕರ ಪ್ರತಿಮೆಗಳನ್ನು ವಿಜಯನಗರದ ಅರಸ ಕೃಷ್ಣದೇವರಾಯನು ನೀಡಿದನೆಂದು ಪ್ರತೀತಿ ಇದೆ.ಗರ್ಭಗೃಹದ ಮುಂಭಾಗದಲ್ಲಿ ಅರ್ಧಮಂಟಪ, ನವರಂಗ ಮತ್ತು ಕಲ್ಯಾಣ ಮಂಟಪಗಳಿವೆ.ನವರಂಗಕ್ಕೆ ಎರಡು ಪ್ರವೇಶ ದ್ವಾರಗಳಿದ್ದು, ಉತ್ತರದ್ವಾರ ದಿಂದ ಕಲ್ಯಾಣ ಮಂಟಪಕ್ಕೆ ಪ್ರವೇಶ ಮಾಡಬಹುದು.ನವರಂಗದ ಮಧ್ಯಭಾಗದಲ್ಲಿರುವ ನಾಲ್ಕು ಕಪ್ಪು ಶಿಲೆಯ ಸ್ತಂಭಗಳು ಚೌಕಾಕಾರವಾಗಿದ್ದು ಅವುಗಳ ಮೇಲೆ ಗಜಾಸುರ ಮರ್ದನ, ಲಿಂಗೋದ್ಭವಮೂರ್ತಿ, ಧ್ಯಾನಸ್ತವಿಷ್ಣು, ನಾಟ್ಯಗಣಪತಿ ಮುಂತಾದ ಉಬ್ಬು ಶಿಲ್ಪಗಳಿವೆ. ನವರಂಗದ ಬಲಭಾಗದಲ್ಲಿ ಸೂರ್ಯ, ಚಂದ್ರ, ಭೈರವ, ಗಣಪತಿ ಮತ್ತು ಕೊಷ್ಮಂಡ ಋಷಿಯ ಬಿಡಿ ಪ್ರತಿಮೆಗಳನ್ನು ಇಡಲಾಗಿದೆ. ಕಲ್ಯಾಣ ಮಂಟಪದ ಬಲಭಾಗದಲ್ಲಿರುವ ಪಾರ್ವತಿ ದೇವಾಲಯದ ಬಲಭಾದಲ್ಲಿ 'ದೊಡ್ಡಮ್ಮ ದೊಣೆ ''ಎಂದು ಕರೆಯುವ ನೀರಿನ ಪುಷ್ಕರಣಿ ಇದೆ. ಪಾರ್ವತಿ ಗುಡಿಯ ಬಳಿಯೇ ಅಂಜೀನಯಸ್ವಾಮಿ ದೇವಾಲಯ ವಿದೆ.ಇಲ್ಲಿ ದೊರೆತಿರುವ ಹೊನ್ನಮ್ಮ ವಿಗ್ರಹ ಪಾಳೆಯಗಾರರ ಕುಟುಂಬಕ್ಕೆ ಸೇರಿದವಳು ಎಂದು ಗುರುತಿಸಲಾಗಿದೆ(೧೦).

**ನಂದಿ ಗ್ರಾಮದ ಭೋಗ ನಂದೀಶ್ವರನ ದೇವಾಲಯ;** ಸುಮಾರು ೩೭೦ ಅಡಿ ಉದ್ದ,೨೫೦ಅಡಿ ಅಗಲದಲ್ಲಿ ಭೋಗನಂದೀಶ್ವರ ಮತ್ತು ಅರುಣಾಚಲೇಶ್ವರ ಎಂಬ ಜೋಡಿ ದೇವಾಲಯದ ಸಂಕೀರ್ಣದಲ್ಲಿ ಎರಡು ಪ್ರತೇಕ ಗರ್ಭಗೃಹಗಳು ಒಂದೇ ಸಾಲಿನಲ್ಲಿದ್ದು, ಅವುಗಳ ಮುಂದೆ ಎರಡು ನಂದಿಮಂಟಪಗಳಿವೆ. ಅವುಗಳಲ್ಲಿ ಒಂದರ ಮುಂದೆ ಒಂದು ಸಣ್ಣ ಗರ್ಭಗೃಹವು ಇದೆ. ಉತ್ತರಭಾಗದ ದೇವಾಲಯವು ಭೋಗನಂದೀಶ್ವರನಿಗಾಗಿ ದಕ್ಷೀಣ ದೇವಾಲಯವು ಅರುಣಾಚಲೇಶ್ವರನಿಗೆ ಸರ್ಮಪಿಸಲಾಗಿದೆ. ಇವುಗಳಲ್ಲಿರುವ ಕಲ್ಲಿನ ಜಾಲಂಧ್ರಗಳು ಕಲಾತ್ಮಕವಾಗಿವೆ. ದೇವಾಲಯದ ಪಾಣಿ ಪೀಠದ ಮೇಲೆ ಬಾಣಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.ಇದರ ಮುಂಭಾಗದಲ್ಲಿ ಅರ್ಧಮಂಟಪ,ನವರಂಗಗಳಿವೆ.ನವರಂಗದ ಮಧ್ಯೆದಲ್ಲಿರುವ ನಾಲ್ಕು ಕಂಬಗಳು ವೃತ್ತಾಕಾರವಾಗಿದ್ದು.ಗಂಗರ ಶೈಲಿಯಲ್ಲಿದೆ.ನಾಲ್ಕು ಕಂಬಗಳ ಮದ್ಯದಲ್ಲಿ ನಂದಿಯ ಏಕಶಿಲಾಮೂರ್ತಿಇದೆ. ನವರಂಗದ ಪಕ್ಷಿಮಕ್ಕೆ ಅಲಂಕೃತ ಸ್ತಂಬಗಳಿರುವ ವಿಶಾಲವಾದ ಕಲ್ಯಾಣ ಮಂಟಪವಿದೆ.ಮುಖಮಂಟಪ ಹನ್ನೆರಡು ಸ್ತಂಭಗಳನ್ನು ಹೊಂದಿದೆ.ಮುಂಭಾಗದಲ್ಲಿ ಪ್ರವೇಶ ದ್ವಾರದ ಬಳಿ ಜಗಲಿಯನ್ನು ಹೊಂದಿದೆ. ದೇವಾಲಯದ ಹಿಂಭಾಗದ ಪ್ರಕಾರದಲ್ಲಿ ಕಮಲೇಶ್ವರ ,ಅಪೀತಾಂಬ, ಕುಚಾಂಬ ಮತ್ತು ಗಿರಿಜಾಂಬರಗುಡಿಗಳಿವೆ.(೧೧).ಅವಿಭಾಜಿತ ಕೋಲಾರ ಜಿಲ್ಲೆಯ ದೇವಾಲಯಗಳಲ್ಲಿ ಇದು ಅತಿ ಪ್ರಾಚೀನ ವಾದದು(೧೧ಎ).

**ದೇವರಗುಡಿಪಲ್ಲಿ ಅಥವಾ ಗಡಿದಂ(ಗಡಿದಂಪಟ್ಟಣ)ನ ಶ್ರೀವೆಂಕಟೇಶ್ವರ ದೇವಾಲಯ;** ವಿಜಯನಗರ ಕಾಲದಲ್ಲಿ ನಿರ್ಮಿತ ವಾದದು.ಕ್ರಿ.ಶ.೧೩೯೨ರ ಶಾಸನವು ವೀರ ಹರಿಹರನ ಆಡಳಿತ ಆವದಿಯಲ್ಲಿ ನಗಣ್ಣ ಒಡೆಯನ ಮೊಮ್ಮಗ ತಿರುಮಲನಾಥನು ತಿರುಮಲಪುರವೆಂಬ ಅಗ್ರಹಾರವನ್ನು ಸ್ಥಾಪಿಸಿ ತಿರುವೆಂಗಳನಾಥ ದೇವಾಲಯ(ವೆಂಕಟೇಶ್ವರ)ವನ್ನು ನಿರ್ಮಿಸಿ ಅದರಲ್ಲಿ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಿದನು ಎಂದು ದಾಖಲಿಸಿದೆ.ಇದೆ ಕಾಲದಲ್ಲಿ ಮಹಾಮಂತ್ರಿ ಮಂಗಪ್ಪ ದಣ್ಣಾನಾಯಕ ಇಲ್ಲಿ ಅಗ್ರಹಾರವನ್ನು ನಿರ್ಮಿಸಿ ಯಲಪಗಾಲಕುಂಟ ಮತ್ತು ತಮ್ಮಡಿಕುಂಟ ಗ್ರಾಮಗಳ ಹುಟ್ಟುವಳಿ ದಾನವನ್ನಾಗಿ ನೀಡಿದನು ಎಂದು ತಿಳಿದು ಬರುತ್ತದೆ, ಈ ದೇವಾಲಯವು  ಗರ್ಭಗೃಹ, ಅರ್ಧಮಂಟಪ,ನವರಂಗ ಹಾಗು ಮುಖಮಂಟಪವನ್ನು ಹೊಂದಿದೆ.ಗರ್ಭಗೃಹದಲ್ಲಿ ಚೌಕಾಕಾರದ ಗರುಡ ಪೀಠದ ಮೇಲೆ ಅಕರ್ಷಕವಾದ ಶಂಖ,ಚಕ್ರ,ವರದ ಮತ್ತು ಕಟಸ್ತಗಳನ್ನು ಹೊಂದಿರುವ ಶ್ರೀದೇವಿ ಮತ್ತು ಭೋದೇವಿಯರ ಸಮೇತ ಸುಮಾರು ಐದು ಅಡಿ ಎತ್ತರದ ಸುಂದರವಾದ ವೆಂಕಟೇಶನನ್ನು ಪ್ರತಿಷ್ಠಾಪಿಸಲಾಗಿದೆ.ಈ ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರ ಶಿಲಗಳ ಅಲಂಕಾರವಿದೆ. ನವರಂಗ ಮುಖಮಂಟಪದಲ್ಲಿರುವ ಸ್ತಂಭಗಳು ದ್ರಾವಿಡ ಶೈಲಿಯಲ್ಲಿವೆ. ಚೌರಸಕಾರದಲ್ಲಿವೆ. ನವರಂಗ ದ್ವಾರದ ಎರಡು ಕಡೆ.ಜಯವಿಜಯರ ಎರಡು ಸುಂದರ ವಿಗ್ರಹಗಳಿವೆ.(೧೨) ಕ್ರಿ.ಶ.೧೬ನೇ ಶತಮಾನದಲ್ಲಿ ಗಡಿದಂ ಪ್ರಸಿದ್ದ ಪಟ್ಟಣ ವಾಗಿತ್ತು. ವಿಜಯನಗರ ಅರಸ ಕೃಷ್ಣದೇವರಾಯನ ನೆನಪಿಗೆ ಇದನ್ನು ದೇವರ ಗುಡಿಪಲ್ಲಿ ಎಂದು ಕರೆಯುತ್ತಿದ್ದರು(೧೨ಎ).  ಇಲ್ಲಿನ ನಾಗಣ್ಣ ಒಡೆಯರು ಇದರ ಜೀಣರ್ೂದ್ಧಾರಕ್ಕೆ ಶ್ರಮಿಸಿದ್ದಾರೆ.ಅಂದು ಇಲ್ಲಿ ಯಜ್ಞಯಾಗಾದಿಗಳು ನೆಡೆಯುತ್ತಿದ್ದವು

**ಬ್ಯಾಟರಾಯಸ್ವಾಮಿ ದಿಬ್ಬ;** ಶಿಡ್ಲಘಟ್ಟದಿಂದ ಅಗ್ನೇಯ ದಿಕ್ಕುನಲ್ಲಿ ನಾಲ್ಕು ಕಿ,ಮಿ,ಅಂತರದಲ್ಲಿ ವಿಜಯನಗರ ಕಾಲದ ದೇವಾಲಯ ಇದಾಗಿದೆ, ಗರ್ಭಗುಡಿಯಲ್ಲಿರುವ ಮೂಲ ವಿಗ್ರಹವನ್ನು ಪೆನುಗೊಂಡದ ಮಾದಮಲ್ಲೇಶ ಬೆಟ್ಟದಿಂದ ತಂದು ಪ್ರತಿಷ್ಠಾಪಿಸಲಾಗಿದೆ ಎಂದು ಪ್ರತೀತಿ ಇದೆ.ಅದು ೪.೫ಅಡಿ ಎತ್ತರವಿದ್ದು, ನಾಲ್ಕು ಕೈಗಳಲ್ಲಿ,ಶಂಖು,ಚಕ್ರ,ಆಭಯ ಹಾಗು ಗದೆಗಳನ್ನು ಹೊಂದಿದೆ.ಅದರ ಜೊತೆಗೆ ಶ್ರೀದೇವಿ,ಭೋದೇವಿಯ ಶಿಲಾವಿಗ್ರಹಗಳಿವೆ. ಈ ದೇವಾಲಯವನ್ನು ಎತ್ತರದ ದಿಬ್ಬದ ಮೇಲೆ ಪಶ್ಚಿಮಾಬಿಮುಖವಾಗಿ ನಿರ್ಮಿಸಲಾಗಿದೆ. ಇದರ ಬಲಭಾಗದಲ್ಲಿ ನೀರಿನ ಪುಷ್ಕರಣಿ ಇದೆ.ದೇವಾಲಯವು ವಿಶಾಲವಾದ ಪ್ರಕಾರ, ಗರ್ಭಗೃಹ, ಅರ್ಧಮಂಟಪ ಹಾಗೂ ಮುಖಮಂಟಪವನ್ನು ಹೊಂದಿದೆ.(೧೩)

**ಮಾರ್ಗಾನುಕುಂಟೆ(ಮೊರಗಾನಿಕುಂಟೆ);** ಇದು ಬಾಗೇಪಲ್ಲಿ ತಾಲ್ಲೂಕ್‌ಗೆ ೧೬ ಕಿ,ಮಿ ಅಂತರದಲ್ಲಿದೆ.ಇಲ್ಲಿ ವಿಜಯನಗರ ಕಾಲದ ಶ್ರೀವೆಂಕಟೇಶ್ವರ ದೇವಾಲಯವಿದೆ. ಗರ್ಭಗುಡಿಯ ಮೇಲೆ ಶಿಥಿಲವಾದ ಶಿಖರವು ೧೬–೧೭ನೇ ಶತಮಾನದಲ್ಲಿ ಜೀರ್ಣೋದ್ದಾರ ಗೊಂಡಿದೆ ಎಂದು ಪ್ರತೀತಿ ಇದೆ.ಈ ದೇವಾಲಯ,

ಗರ್ಭಗುಡಿ, ಅರ್ಧಮಂಟಪ, ನವರಂಗಗಳನ್ನು ಹೊಂದಿದೆ. ಗರ್ಭಗೃಹವು ಚೌರಸವಾಗಿದ್ದು. ಅದರಲ್ಲಿ ಐದು ಅಡಿ ಎತ್ತರದ ಸಿಂಹದ ಪ್ರಭಾವಳಿಯ ಶಾಸನೋಕ್ತ ತಿರುವೆಂಗಳನಾಥ ಅಥವಾ ವೆಂಕಟೇಶ್ವರನ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟದಲ್ಲಿ ದೇವಕೋಷ್ಠಗಳಿದ್ದರು ಅವುಗಳಲ್ಲಿ ಯಾವುದೆ ಶಿಲ್ಪಗಳಿಲ್ಲ. ಕ್ರಿ.ಶ.೧೫೩೯ರ ಶಾಸನವು ಈ ದೇವಾಲಯಕ್ಕೆ ಪೆನುಗೊಂಡವನ್ನು ಆಡಳಿತವನ್ನು ನಿರ್ವಹಿಸುತ್ತಿದ್ದ ವೀರಪ್ರತಾಪ ಅಚ್ಯುತರಾಯನು ತನ್ನ ಅಧಿಕಾರಿಗಳಾದ ಭಂಡಾರಿ ಅಪ್ಪರಸಯ್ಯನ ಮಗ ತಿಮ್ಮರಸ, ಕೊಂಡಪ್ಪ ಮೂದಲಾದವರ ಮೂಲಕ ಹಲವುದತ್ತಿಗಳನ್ನು ನೀಡಿರುವುದು ದಾಖಲಿಸುತ್ತದೆ.(೧೪)

**ಮಿಟ್ಟೇಮರಿ(ಗರುಡಾದ್ರಿಪುರ)ಯ ಲಕ್ಷ್ಮೀ ನರಸಿಂಹ ದೇವಾಯ;** ಊರಿನಲ್ಲಿ ಎತ್ತರವಾದ ಸ್ಥಳದಲ್ಲಿ ವಿಜಯನಗರೋತ್ತರ ಕಾಲದ ದೇವಾಲಯ ಇದಾಗಿದೆ.ಸುಮಾರು ೩೦–೪೦ ಮೆಟ್ಟಲುಗಳನ್ನು ಹತ್ತಿಹೋಗಬೇಕಾಗುತ್ತದೆ. ದೇವಾಲಯದ ಮಹಾದ್ವಾರದಲ್ಲಿ ಎರಡು ಮಂಟಪಗಳಿದ್ದು,ಒಂದರಲ್ಲಿ ಅಂಜಿನೇಯ ಮತೊಂದರಲ್ಲಿ ಸುಮಾರು ಮೂರಡಿ ಎತ್ತರದ ಗರುಡ ಮೂರ್ತಿಗಳಿವೆ. ದೇವಾಲಯವು ವಿಶಾಲವಾದ ಕಲ್ಲಿನ ಪ್ರಕಾರವನ್ನು ಹೊಂದಿದ್ದು, ಗರ್ಭಗೃಹ, ನವರಂಗ ಹಾಗು ಮುಖಮಂಟಪವನ್ನು ಹೊಂದಿದೆ.ಗರ್ಭಗೃಹದಲ್ಲಿ ಸುಮಾರು ಒಂದುವರೆ ಅಡಿ ಎತ್ತರದ ಲಕ್ಷ್ಮೀನಾರಾಯಣ ಸ್ವಾಮಿ ಅಸ್ಪಷ್ಟ ವಿಗ್ರಹವಿದೆ. ನಾರಾಯಣನನು ತನ್ನ ತೊಡೆಯ ಮೇಲೆ ಲಕ್ಷ್ಮೀಯನ್ನು ಕುಳ್ಳರಿಸಿಕೊಂಡು ಪೀಠದ ಮೇಲೆ ಅಸೀನವಾಗಿರುವುದು ಆಕರ್ಷಕವಾಗಿದೆ.ಒಂದೇ ಗರ್ಭಗೃಹ ದಲ್ಲಿ ವಿಭಿನ್ನ ವಿಷ್ಣುಮೂರ್ತಿಗಳು ಅಪರೂಪವಾಗಿದೆ.ಈ ಊರಿಗೆ ಸಂಬಂದಿಸಿದ ಮೂರು ಕ್ರಿ.ಶ,೧೬೩೬ರ ತಾಮ್ರಶಾಸನದಲ್ಲಿ ಮಾಹಾನಾಯಕಾಚಾರ್ಯ ಗುಮ್ಮಿನಾಯನಿ ನರಸಿಂಹನಾಯನಿಯ ಮಗ ಕದಿರಪ್ಪನಾಯನಿ ಮಿಟ್ಟೇಮರಿಯ ಮೇಕಲಾಬೊಮ್ಮ ಎಂಬ ದಾಸಗಾವುಂಡನಿಗೆ ಈ ಸ್ಥಳ ಕೆರೆಯ ವಡ್ಡಿನ ದುರಸ್ಥಗಾಗಿ ಹಲವಿ ದಾನಗಳನ್ನು ನೀಡಿದ್ದನ್ನು ಉಲ್ಲೇಖಿಸಿದೆ. ಇದೇ ಊರಬಾಗಿಲನ ಬಳಿಯಿರುವ ಕ್ರಿ,ಶ,೧೫೩೩ರ ಶಾಸನವು ಕರಾಳಿ ನರಸಿಂಹ ದೇವರಿಗೆ ನಾಯಕ್ಷಿಪನೆಂಬ ಅಧಿಕಾರಿಯು ತಿಮ್ಮರಸನ ಆಡಳಿತದಲ್ಲಿ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ.(೧೫).

**ಸಾದಲಿ(ಸಹದೇವಪುರ)**;ಇಲ್ಲಿ ನಂದೀಶ್ವರ ದೇವಾಲಯವಿದೆ. ಈ ಊರಿನ ನಾಗರ ಕಲ್ಲುನ ಕಟ್ಟೆಯ ಬಳಿ ಕ್ರಿ,ಶ, ೧೭೭೨ರ ಶಾಸನದಲ್ಲಿ ಆವತಿ ನಾಡ ಪ್ರಭು ದೊಡ್ಡ ಭೈರೇಗೌಡನ ಮೊಮ್ಮಗ ಚನ್ನಪ್ಪಯ್ಯನ ಮಗ ರಾಮಸ್ವಾಮಿಯೆಂಬ ಅಧಿಕಾರಿಯು ನಂದೀಶ್ವರ ದೇವರ ಅರ್ಚಕರಾದ ರಾಮಶಾಸ್ತ್ರಿ ಎಂಬುವರಿಗೆ ನೀಡಿದ ಹಲವು ದಾನಗಳನ್ನು ದಾಖಲಿಸುತ್ತದೆ.(೧೬)

**ಸೀತಿ ಬೆಟ್ಟದ ಕಾಲ ಭೈರವೇಶ್ವರ ದೇವಾಲಯ;** ಕೋಲಾರದಿಂದ ಇಪ್ಪತ್ತು ಕಿ,ಮಿ,ಅಂತರದಲ್ಲಿದೆ ಶಾಸನಗಳಲ್ಲಿ ಇದಕ್ಕೆ ಶ್ರಿಪತಿ, ಸೀಪತಿ, ಶ್ರೀಪತಿ ಮಲೆ ಎಂದು ಉಲ್ಲೇಖ ವಾಗಿದೆ.ಇಲ್ಲಿರುವ ಭೈರವೇಶ್ವರ

ದೇವಾಲಯದ ಭೈರವೇಶ್ವರನು ಚಿಕ್ಕಬಳ್ಳಾಪುರ ಪ್ರದೇಶದ ಪಾಳೆಗಾರರ (ಮೊರಸು ಒಕ್ಕಲಿಗ,ರೆಡ್ಡಿಗರ) ಆರಾಧ್ಯ ದೇವರಾಗಿದ್ದಾರೆ. ಇದೊಂದು ಗುಹಾಂತರ ದೇವಾಲಯ. ರಚನೆಯಲ್ಲಿ ಕೈವಾರ ಅಮರನಾಯಣ ದೇವಾಲವನ್ನು ಹೋಲುತ್ತದೆ(೧೬ಎ).ಇದು ಬೆಟ್ಟದ ಮೇಲಿರುವ ದೇವಾಲಯ. ಬೆಟ್ಟವನ್ನು ಹತ್ತಲು ದುರಸ್ಥಗೊಳಿಸಿರುವ ಮೆಟ್ಟಲುಗಳಿವೆ. ಮೇಲ್ಭಾಗದಲ್ಲಿ ಸಮತಟ್ಟಾದ ಪ್ರದೇಶದಲ್ಲಿ ದೇವಾಲಯವಿದೆ.ಇಲ್ಲಿನ ಕ್ರಿ.ಶ.೧೩೭೬ರ ಶಾಸನದಲ್ಲಿ ವಿಜನಗರದ ಅರಸು ವೀರಬುಕ್ಕರಾಯನ ಆಳ್ವಿಕೆಯಲ್ಲಿ ವೆಂಗಡವರನ ಮಗ ಅಳಗೀಯ ವರದಾರ್ ಅಧಿಕಾರಿಯು ಸೀಪತಿಯ ಸೇವೆಗಾಗಿ ವಿವಿದ ತರಿಗೆಗಳ ಮನ್ನಾ ಮಾಡಿದ ವಿವರಗಳನ್ನು ದಾಖಲಿಸುತ್ತದೆ.ರಾಯಗೋಪುರ ಹೊಂದಿರುವ ಪ್ರವೇಶದ್ವಾರವಿದೆ.ಈ ಗೋಪುರದ ಕೆಳಗೆ ವಿಶಾಲವಾದ ನಗರಿಖಾನೆ ಇದ್ದು,ಇದರ ಒಳಭಾಗದ ಇಕ್ಕಲಗಳಲ್ಲಿ ವಿಜಯನಗರ ಶೈಲಿಯ ಗಂಗೆ ಮತ್ತು ಯಮುನೆಯರ ಶಿಲ್ಪಗಳನ್ನು ಕೆತ್ತನೆ ಮಾಡಲಾಡಲಾಗಿದೆ. ಭೈರವ ದೇವಾಲಯದಲ್ಲಿ ಗರ್ಭಗುಡಿ, ಅರ್ಧಮಂಟಪ ಮತ್ತು ನವರಂಗಗಳಿದ್ದು ಮುಂಭಾಗದಲ್ಲಿ ಯಾಳಿಗಳಿರುವ ಪ್ರವೇಶದ್ವಾರವಿದೆ. ಇದರ ಮುಂಭಾಗದಲ್ಲಿ ವಿಶಾಲವಾದ ಮುಖಮಂಟಪವಿದೆ.ಗರ್ಭಗೃಹವು ಚೌರಸವಾಗಿದ್ದು ಸಮಭಂಗಿಯಲ್ಲಿರುವ ಚತುರ್ಭುಜಾಕಾರದ ಗಂಗರ ಶೈಲಿಯ ಭೈರೇಶ್ವರನ ಶಿಲಾಮೂರ್ತಿಯನ್ನು ಹೊಂದಿದೆ. ಅದು ಸೌಮ್ಯ ಹಾಗು ಗಂಭೀರ ಮುಖಮುದ್ರೆಯನ್ನು ವ್ಯಕ್ತಪಡಿಸುತ್ತದೆ.ಹಿಂಭಾಗದಲ್ಲಿ ಅಗ್ನಿಶಿಲೆಯ ಅಶ್ವತ್ಥ ಪ್ರಕಾರದ ಪ್ರಭಾವಳಿ ಇದೆ. ಮೂರ್ತಿಯು ಕಡಗ, ಒಡ್ಯಾಣ, ಉದರಬಂಧ ಹಾಗು ರುಂಡಮಾಲೆ ಉಪವೀತವೂ ಮೊಳಕಾಲದ ವರೆಗೆ ಇಳಿಬಿಟ್ಟಿದೆ. ನಾಲ್ಕು ಕೈಗಳಲ್ಲಿ ತ್ರಿಶೋಲ, ಪಾಶ, ಪಾನಪಾತ್ರೆ ಮತ್ತು ಅಕ್ಷಮಾಲೆಗಳನ್ನು ಭೈರವ ಹೊಂದಿರುವನು.ಹಿಂಭಾಗದಲ್ಲಿ ಐದು ಹೆಡೆಯ ಸರ್ಪದ ಅಲಂಕಾರದ ಪ್ರಭಾವಳಿಯಿದೆ.ಮೂರ್ತಿಗೆ ಕರ್ಣಕುಂಡಲ ಮತ್ತು ಕಂಠಾಭರಣಗಳಿವೆ.ಅರ್ಧಮಂಟಪ ಕಿರಿದಾಗಿ ಸರಳವಾಗಿದೆ, ಇದರ ಮುಂಭಾಗದಲ್ಲಿರುವ ನವರಂಗವು ಗಂಗರ ಅಥವಾ ಪಲ್ಲವರ ಶೈಲಿಯ ಸಿಂಹ ಪೀಠವನ್ನು ಹೊಂದಿರುವ ನಾಲ್ಕು ವೃತ್ತಕಾರದ ಸ್ತಂಭಗಳಿದ್ದು ಮೇಲ್ಭಾಗದಲ್ಲಿ ದಿಂಬಿನಕಾರದ ಪೀಠಗಳನ್ನು ಹೊಂದಿದೆ. ನವರಂಗದ ಪ್ರವೇಶದ್ವಾರದ ಇಕ್ಕಲುಗಳಲ್ಲಿ ಅಲಂಕೃತವಾದ ಕಲ್ಲಿನ ಜಾಲಂದ್ರಗಳಿವೆ. ನವರಂಗದ ಒಳಭಾವಣಿಯಲ್ಲಿ ಅಷ್ಟದಿಕ್ಪಾಲಕರ ಸುಂದರ ಶಿಲ್ಪಗಳಿದ್ದು ಮದ್ಯದಲ್ಲಿ ನಂದಿಯ ಮೇಲೆ ಅಲಂಕಾರಯುತ ಲಲಿ ತಾ ಸನದಲ್ಲಿ ಪೀಠದ ಮೇಲೆ ಕುಳಿತಿರುವ ಶಿವಪಾರ್ವತಿಯರ ಸುಂದರ ಶಿಲ್ಪವಿದೆ. ಶಿವನು ಚರ್ತಭುಜ,ಕಿರೀಟ, ಡಮರುಗ ತ್ರಿಶೂಲ,ಜಿಂಕೆ ಹಾಗು ಆಭೆಯ ಮುದ್ರೆಗಳನ್ನು ಹೊಂದಿರುವನು.ಇಲ್ಲಿ ಒಂದೆಡೆ ನಾಟ್ಯಗಣಪತಿ, ಹಾಗು ದ್ವಿಬಾಹು ಭೈರವನ ದ್ವಿಭಂಗದ ಶಿಲ್ಪಗಳಿವೆ. ಗರ್ಭಗೃಹದ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾದ ವಿಜಯನಗರ ಶೈಲಿಯ ಶಿಥಿಲವಾದ ಶಿಖರವಿದೆ.(೧೭)

**ದೇವನಹಳ್ಳಿ ಕೋಟೆ ವೇಣುಗೋಪಾಲ ದೇವಾಲಯ;** ದ್ರಾವಿಡ ಶೈಲಿಯಲ್ಲಿದೆ, ಆವತಿಯ ಗೌತಮಗಿರಿಯ ಮೇಲಿರುವ ತಿಮ್ಮರಾಯಸ್ವಾಮಿ ದೇವಾಲಯದ ಪ್ರತಿರೂಪದಂತಿದೆ. ಕ್ರಿ.ಶ.೧೫೦೧ರಸುಮಾರಿಗೆ ರಣಭೈರೇಗೌಡನ ಮಗ ಮಲ್ಲಭೈರೇಗೌಡನು ಇಲ್ಲಿ ಕೋಟೆಯನ್ನು ಕಟ್ಟಿದಲ್ಲದೆ ಕೋಟೆಯ ಒಳಗೆ ಪಶ್ಚಿಮ ದಿಕ್ಕುನಲ್ಲಿ ಪೂರ್ವಬಿಮುಖವಾಗಿ ಶ್ರೀವೇಣುಗೋಪಾಲ ಸ್ವಾಮಿ ದೇವಾಲಯವನ್ನು ನಿರ್ಮಿಸಿದನು(೧೮).ಇಲ್ಲಿನ ಕ್ರಿ.ಶ.೧೬೯೮ರ ಶಾಸನದಲ್ಲಿ ಆವತಿನಾಡ ಪ್ರಭು ಮುದ್ದಭೈರೇಗೌಡನ ಮೊಮ್ಮಗ ಸಣ್ಣ ಭೈರೇಗೌಡ , ಈತನ ಧರ್ಮಪತ್ನಿ ಕೆಂಪಮ್ಮ ಮತ್ತು ಮಗ ಗೋಪಾಲ ಗೌಡ ಈ ದೇವಾಲಯದ ಅನೇಕ ಗ್ರಾಮಗಳನ್ನು ದಾನ ನೀಡಿರುವದು ಉಲ್ಲೇಖಿಸಿದೆ,ಅಲ್ಲದೆ ದೇವಾಲಯದ ಬೆಳ್ಳಿಬಟ್ಟಲು ಮತ್ತು ಗಂಟೆಯ ಮೇಲೆ ಇರುವ ಲಿಪಿಯ ರೀತ್ಯವು ಹೈದರ ಆಲಿ ಮತ್ತು ಪೇಶ್ವೆ ಬಾಲಾಜಿರಾಯನ ಅಧೀನ ಅಧಿಕಾರಿಯೊಬ್ಬ ದೇವಾಲಯಕ್ಕೆ ನೀಡಿರುವುದರ ಬಗ್ಗೆ ಉಲ್ಲೇಖಿತವಾಗಿದೆ.

ಮುಖಮಂಟಪದಲ್ಲಿ ಉಬ್ಬು ಶಿಲ್ಪಗಳಿಂಗ ಕೋಡಿರುವ ನಾಲ್ಕು ಕಂಬಗಳಿವೆ.ಮಧ್ಯದ ಎರಡು ಕಂಬಗಳಲ್ಲಿ ಯಾಲಿಗಳ ಮೇಲೆ ಖಡ್ಗ ಹಿಡಿದ ಸವಾರರು ಕುಳಿತಿರುವ ಶಿಲ್ಪವು ಅಮೋಗವಾಗಿದೆ. ವಿಶಾಲವಾದ ನವರಂಗದಲ್ಲಿ ಸುಂದರ ಬೋದಿಗೆಗಳಿಂದ ಕೂಡಿದ ಕೃಷ್ಣ ಶಿಲೆಯ ನಾಲ್ಕು ಕಂಬಗಳಿದ್ದು ಇವುಗಳ ಸುತ್ತಲೂ ಉಬ್ಬು ಶಿಲ್ಪಗಳಿವೆ. ಗರ್ಭಗೃಹದಲ್ಲಿ ವಿಜಯನಗರ ಶೈಲಿಯ ಗೋಪಾಲ ವೇಣೂಗಾನದ ನೃತ್ಯಭಂಗಿಯಲ್ಲಿ ರುಕ್ಮಿಣಿ ಸತ್ಯಭಾಮೆಯರ ಶಿಲಾಮೂರ್ತಿಗಳಿವೆ. ದೇವಾಲಯದ ಮಹಾದ್ವಾರವು ಪೂರ್ವದಿಕ್ಕುನಲ್ಲಿದ್ದು ಅದರ ಮೇಲೆ ಗಾರೆ ಇಟ್ಟಿಗೆಗಳಿಂದ ರಾಜಗೋಪುರವನ್ನು ನಿರ್ಮಿಸಲಾಗಿದೆ. ಆವತಿಯ ಚನ್ನಕೇಶವ ದೇವಾಲಯದ ಎದುರಿಗೆ ಇರುವಂತೆ ಇಲ್ಲಿಯೂ ಸಹ ಈ ದ್ವಾರದ ಮುಂದೆ ಚಿತ್ತಾರಗೋಳಿಸಿದ ನಾಲ್ಕುಸ್ತಂಭಗಳಿಂದ ಕೋಡಿರುವ ಉಯ್ಯಾಲೆಮಂಟಪವಿದೆ. ಈ ಮಹಾದ್ವಾರದ ಇಕ್ಕಲುಗಳಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಗಂಗರ ಶೈಲಿಯ ವಿಷ್ಣು ಮೂರ್ತಿಗಳನ್ನು ನಿಲ್ಲಿಸಲಾಗಿದೆ. ಆವತಿಯ ತಿಮ್ಮರಾಯಸ್ವಾಮಿ ಮತ್ತು ದೊಡ್ಡಬಳ್ಳಾಪುರದ ಆದಿನಾರಾಯಣ ಸ್ವಾಮಿ ದೇವಾಲಯಗಳ ಹೋರಗೋಡೆಯ ಮೇಲೆ ಬಿಡಿಸಿರುವ ಶಿಲ್ಪ ಮಾಲಿಕೆಯಂತೆ ಇಲ್ಲಿಯೂ ಕೂಡ ರಾಮಾಯಣ ಪ್ರಸಂಗವನ್ನು ಕಾಣಬಹುದು.ಉತ್ತರ ಮತ್ತು ದಕ್ಷಣದ ಗೋಡೆಗಳ ಮೇಲೆ ಕಡೆದಿರುವ ದೃಷ್ಯಮಾಲಿಕೆಯು ಅಮೋಗವಾಗಿದೆ.

**ಎಂಬ್ರಹಳ್ಳಿ ಬೆಟ್ಟದ ತಿಮ್ಮರಾಯ ಸ್ವಾಮಿ ದೇವಾಲಯ.**; ಆವತಿ ಗ್ರಾಮದಿಂದ ಎರಡು ಕಿ.ಮಿ.ಪಾಸಾಲೆಯಲ್ಲಿ ಮತ್ತು ಎಂಬ್ರಹಳ್ಳಿಯ ಸಮೀಪದಲ್ಲಿ ಸಣ್ಣಬೆಟ್ಟವಿದೆ.ಇದರ ಪಶ್ಚಿಮಾಂಚಿನಲ್ಲಿ ಪೂರ್ವಭಿಮುಖವಾಗಿ ಈ ದೇವಾಲಯ ನಿರ್ಮಾಣಗೊಂಡಿದೆ. ಹದಿನಾಲ್ಕನೆ ಶತಮಾನದ ಅಂತ್ಯದಲ್ಲಿ ಆವತಿ ಪಾಳೆಗಾರ ರಣಭೈರೇಗೌಡ ಮತ್ತು ಅವನ ಸೋದರರಿಂದ ನಿರ್ಮಾಣವಾಗಿದೆ(೧೯). ಇದು ದ್ರಾವಿಡ

ಶೈಲಿಯಲ್ಲಿದೆ. ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಶಿಲಾಮೂರ್ತಿಯನ್ನು ಪುರಾಣ ಪುರುಷ ಗೌತಮ ಋಷಿ ಮುನಿಗಳಿಂದ ಪ್ರತಿಷ್ಠಾಪಿಸಲಾಗಿದೆ ಎಂದು ಪ್ರತೀತಿ ಇದೆ.ನವರಂಗದ ಬಲಭಾಗದಲ್ಲಿ ಪುಟ್ಟಗುಡಿಯಲ್ಲಿ ಚತುರ್ಭುಜದ ಗಜಲಕ್ಷ್ಮೀ ವಿಗ್ರಹವಿದೆ.ಮುಖಮಂಟಪ ವಿಶಾಲವಾಗಿದ್ದು ಸುಂದರವಾದ ನಾಲ್ಕು ಕಂಬಗಳಿಂದ ಕೂಡಿದವೆ ಮತ್ತು ಅದರ ದ್ವಾರದಲ್ಲಿ ಸಹಜವಾದ ಎಡಬಲದಲ್ಲಿ ಜಯವಿಜಯ ಎಂಬ ದ್ವಾರಪಾಲಕರ ವಿಗ್ರಹಗಳಿವೆ..ಕಂಬಗಳ ಮೇಲೆ ದಶಾವತಾರ ಮತ್ತು ಶ್ರೀಕೃಷ್ಣನ ಬಾಲ ಲೀಲೆಗಳ ಉಬ್ಬು ಶಿಲ್ಪಗಳಿವೆ. ಗರ್ಭಗೃಹದಲ್ಲಿರುವ ತಿಮ್ಮರಾಯ ಸ್ವಾಮಿ ವಿಗ್ರಹಕ್ಕು ಮತ್ತು ದೇವನಹಳ್ಳಿಯ ವೇಣುಗೋಪಾಲ ಸ್ವಾಮಿ ವಿಗ್ರಹಕ್ಕೆ ಸೌಮ್ಯತೆ ಇದೆ(೨೦).ಗರ್ಭಗಡಿಯ ದಕ್ಷಿಣ ಪಾರ್ಶ್ವದಲ್ಲಿ ಶ್ರೀ ಕೃಷ್ಣನ ಬಾಲ ಲೀಲೆಗಳನ್ನು ತುಂಬಾ ಹೃದಯಂಗಮವಾಗಿ ಬಿಡಿಸಲಾಗಿದೆ.ಗರ್ಭಗೃಹದ ಹಿಂಭಾಗದಲ್ಲಿ ಶ್ರೀರಾಮನ ಪಟ್ಟಾಭಿಷೇಕವನ್ನು ಯಥಾವತ್ತಾಗಿ ಬಿಡಿಸಲಾಗಿದೆ.ದೇವಾಲಯ ಉತ್ತರ ಪಾರ್ಶ್ವದ ಗೋಡೆಯ ಮೇಲೆ ವಿಷ್ಣುವಿನ ದಶಾವತಾರವನ್ನು ಉಬ್ಬು ಶಿಲ್ಪಗಳಲ್ಲಿ ಸುಂದರವಾಗಿ ಬಿಡಿಸಲಾಗಿದೆ.ದೇವಾಲಯದ ಮುಂಭಾಗದಲ್ಲಿ ಉತ್ತರ ಪಾರ್ಶ್ವದಲ್ಲಿ ಸಂಗೀತ ಮತ್ತು ನರ್ತನ ಸೇವೆ ಕೆತ್ತನೆಗಳಿವೆ. ದೇವಾಲಯದ ಮಹಾದ್ವಾರದಲ್ಲಾಗಲಿ ಅಥವಾ ಗರ್ಭಗುಡಿ ಮೇಲಾಗಲಿ ಗೋಪುರಗಳು ಇಲ್ಲ. ದೇವಾಲಯದ ಮುಂಭಾಗದಲ್ಲಿ ಹದಿನೈದು ಅಡಿ ಎತ್ತರದ ಧ್ವಜ ಸ್ತಂಭ ಮತ್ತು ಬಲಿ ಪೀಠಗಳು ಮಾಮೂಲಿಯಾಗಿವೆ.

**ದೊಡ್ಡ ಬಳ್ಳಾಪುರದ ಆದಿನಾರಾಯಣ ಸ್ವಾಮಿ ದೇವಾಲಯ;** ದೊಡ್ಡಬಳ್ಳಾಪುರದ ಪಾಳೆಯಗಾರ ಮಲ್ಲಭೈರೇಗೌಡನು ವಿಜಯನಗರ ಶೈಲಿಯಲ್ಲಿ ನಿರ್ಮಿಸಿದನು. ಈಗ ಉಳಿದು ಕೊಂಡಿರುವ ಈ ಹಾಳು ಮಂಟಪ ಅಂದಿನ ದೇವಾಲಯದ ಮುಖಮಂಟಪದ ಪ್ರವೇಶದ್ವಾರವಾಗಿತ್ತು. ಒಂದು ಮೂಲದ ಪ್ರಕಾರ ಈಗಿನ ಇಡೀ ಗಾಂಧಿನಗರ ಮತ್ತು ಹಳೆಯ ಬಸ್ ನಿಲ್ದಾಣವೇ ಈ ದೇವಾಲಯದ ಪ್ರಕಾರದಲ್ಲಿದೆ.ಇದಕ್ಕೆ ಪೂರಕ ಆಧಾರವಾಗಿ ಈ ದೇವಾಲಯದ ಆಗಾಧತೆಯನ್ನು ಊಹಿಸಲು ನಾಗರಕೆರೆಯ ಕೋಡಿಕಟ್ಟೆ ಮತ್ತು ಮೆಟ್ಟಲುಗಳಿಗೆ ಬಳಸಿರುವ ಬೃಹತ್ ಗ್ರಾನೈಟ್ ಕಲ್ಲುಗಳನ್ನು ಗಮನಿಸಬಹುದು. ಇಡೀ ಕೆರೆಗೆ ಹಾಕಿರುವ ಒಂದೂವರೆ.ಕಿ.ಮೀ .ಉದ್ದದ ಕಲ್ಲಿನ ಮೆಟ್ಟಲುಗಳು ಇದೆ ದೇವಾಲಯವು.ಇವುಗಳನ್ನಿ ಸೂಕ್ಷ್ಮವಾಗಿ ಗಮನಿಸಿದರೆ ದೇವಾಲಯದ ಕೆತ್ತನೆಯ ಭಾಗಗಳು ಕಂಬದ ತುಂಡುಗಳು, ಗುಬುಟೆಗಳು, ಮೂಲೆಗಲ್ಲುಗಳು, ಪದ್ಮಪೀಠ, ಬೋದಿಕಲ್ಲುಗಳು ವಿಷ್ಣು ದಶಾವತಾರ ಕೆಲವು ಭಗ್ನ ಅವಶೇಷಗಳಿರುವು ಕಂಡು ಬರುತ್ತದೆ.ಈ ದೇವಾಲಯದವು ಪೂರ್ವ-ಪಶ್ಚಿಮಾಭಿಮುಖವಾದೆ,ಗರ್ಭಗೃಹ, ಅಂತರಾಳ, ಅರ್ಧಮಂಟಪ, ಮೂರು ಕಡೆ ಪ್ರವೇಶ ಇರುವ ಸಭಾಮಂಟಪ ಅಥವಾ ನವರಂಗ,ಮುಖಮಂಟಪ,ಕಲ್ಯಾಣ ಮಂಟಪ, ಪರಿವಾರ ಹಾಗೂ ಪರಿಚಾರಕ ದೇವತೆಗಳಿಗಾಗಿ ಕಿರುಮಂದಿಗಳು, ಇವೆಲ್ಲವನ್ನು ಆವರಿಸಿರುವಂತೆ ಉನ್ನತ ಗೋಪುರಗಳಿಂದ

ಕೂಡಿದ ಪ್ರವೇಶದ್ವಾರಗಳು ಕೂಡಿದ ಪ್ರವೇಶದ್ವಾರಗಳಿರುವ ಎತ್ತರದ ಪ್ರಕಾರ ವಿರುತ್ತದೆ. ಪೂರ್ವದ ಪ್ರವೇಶದ ಕಡೆ ಬಲಿಪೀಠ, ಧ್ವಜಸ್ತಂಬಖ್ಖ,ದೀಪಸ್ತಂಭಗಳು ಉಯ್ಯಾಲಮಂಟಪ ವಸಂತಮಂಟಪ, ವಾಹನಮಂಟಪ, ರಂಗಮಂಟಪ, ಕನ್ನಡಿಮಂಟಪ, ಸಂಗೀತಮಂಟಪ ಗಳಿರಬಹುದು(೨೧). ಈಗ ಹಳೇಬಸ್ ನಿಲ್ದಾಣದಲ್ಲಿರುವ ಇರುವ ಅಲಂಕೃತ ಕಲ್ಯಾಣಿ ಪಾಳೆಗಾರರ ಕಾಲದಕಟ್ಟಡಗಳಲ್ಲಿ ಉತ್ಕೃಷ್ಟವಾಗಿದ್ದು, ಈ ಶೈಲಿಯಲ್ಲಿದೆ. ಪುಷ್ಕರಣಿಯನ್ನು ಸಮಾನಾಕಾರಾದ ಬಿರುಸುಕಲ್ಲಿನಿಂದ ಕಟ್ಟಲಾಗಿದೆ.ಕಲ್ಯಾಣಿಯ ಮೆಟ್ಟಲುಗಳು ನಿರಂತರವಾಗಿ ಉಪಯೋಗಿಸಿ ಸವೆದಿರುವುದು ಕಂಡು ಬರುತ್ತದೆ(೨೨). ಗಾಣಿಗರ ಪೇಟೆಯ ಲಕ್ಷೀನಾರಾಯಣಸ್ವಾಮಿ ದೇವಾಲಯವು ದೊಡ್ಡಬಳ್ಳಾಪುರದ ಪಾಳೆಯಗಾರ ಹಾವಳಿ ಭೈರೇಗೌಡನ ಕಾಲದಲ್ಲಿ ರಚನೆಗೊಂಡಿದೆ.

ಸುಗುಟೂರಿನ ಚನ್ನಕೇಶವ ದೇವಾಲಯ, ಸೋಮೇಶ್ವರ ದೇವಾಲಯ, ಹೊಸಕೋಟೆಯ ಅವಮುಕ್ತೇಶ್ವರ ದೇವಾಲಯ.ಆನೇಕಲ್ಲು ತಾಲ್ಲೂಕಿನ ಸರ್ಜಾಪುರದ ಚನ್ನಕೇಶವ ದೇವಾಲಯಗಳು ಸುಗುಟೂರು ಪಾಳೆಯಗಾರರಿಂದ ನಿರ್ಮಿತವಾದವು. ಇವುಗಳಲ್ಲದೆ ಹಲವು ದೇವಾಲಯಗಳ ಅಭಿವೃದ್ಧಿಗೆ ಧಾನದತ್ತಿಗಳನ್ನು ನೀಡಿದ್ದಾರೆ.,ಕ್ರಿ.ಶ.೧೭೫೪ರಲ್ಲಿ ಇದೆ ವಂಶದ ಇಮ್ಮಡಿ ಚಿಕ್ಕರಾಯರು ಚೌಡಪಲ್ಲಿ ದೇವಾಲಯಕ್ಕೆ ಭೊಮಿಯನ್ನು ದತ್ತಿಯಾಗಿ ನೀಡಿದ್ದಾರೆ. ಕ್ರಿ.ಶ.೧೫೬೪ರಲ್ಲಿ ಹೊಸಕೋಟೆ ತಾಲ್ಲೂಕಿನ ಸೋಮೇಶ್ವರ ದೇವಾಲಯ ಮತ್ತು ವೀರಭದ್ರ ದೇವಾಲಯಕ್ಕೆ .ಇದೇ ವಂಶ ತಮ್ಮೆಗೌಡರು ಭೂದಾನ ಮಾಡಿರುವುದು ಕಂಡುಬರುತ್ತದೆ(೨೩).

ಬಾಗೇಪಲ್ಲಿ ತಾಲ್ಲೂಕಿನ ಗುಮ್ಮನಾಯಕನ ಪಾಳ್ಯದ ಪಾಳೆಗಾರರ ತಮ್ಮ ಪಾಳೆಯ ಪಟ್ಟುವನ್ನು ವಿಜಯನಗರ ಸಾಮ್ರಾಜ್ಯದ ಪೂರ್ವವಿಕವಾಗಿಯು ಅಸ್ಥತ್ವಕ್ಕೆ ಬಂದಿದ್ದು ಧರ್ಮ, ಕಲೆ ಮತ್ತು ವಾಸ್ತುಶಿಲಕ್ಷ್ವಿ ಅಮೋಘವಾದ ಕೋಡುಗೆಯನ್ನು ನೀಡಿದ್ದಾರೆ. ಗುಮ್ಮನಾಯಕನಪಾಳೆಯ ಕೋಟೆ ಹಾಗು ಅದರ ಹೊರ ಭಾಗದಲ್ಲಿ ಅವರಿಂದ ಹತ್ತು ಹಲವು ಗುಡಿಗೋಪುರಗಳು ರಚೆಗೊಂಡಿರುವುದು ಕಂಡು ಬರುತ್ತದೆ ಅವು; ಈಶ್ವರ ದೇವಾಲಯ, ನರಸಿಂಹಸ್ವಾಮಿ ದೇವಾಲಯ, ಆಂಜನೇಯ ಗುಡಿ. ಗಣೇಶ ಗುಡಿ. ಒಲಸಿ ಮಾರಮ್ಮಗುಡಿ, ವೆಂಕಟೇಶ್ವರನಗುಡಿ, ರಾಮಸ್ವಾಮಿ ದೇವಾಲಯ, ವೇಣುಗೋಪಾಲಸ್ವಾಮಿ ದೇವಾಲಯಗಳು ಪ್ರಮುಖವಾಗಿವೆ(೨೪).

ನಂದಿದುರ್ಗದ ಬಳಿ ಇರುವ ಚೆನ್ನಕೇಶವ ಬೆಟ್ಟ ಕೋಟೆಯೋಳಗೆ ಇರುವ ವಿಷ್ಣು ಹಾಗು ಈಶ್ವರ ದೇವಾಲಯಗಳು, ಕಳವರದುರ್ಗದ ಮೇಲೆ ಕೋಟೆಯಲ್ಲಿನ ಈಶ್ವರಗುಡಿ, ಗುಡಿಬಂಡೆಯ ಸುರಪದ್ಮಗಿರಿಯ ಮೇಲಿರುವ ಈಶ್ವರ ಮತ್ತು ಪಾರ್ವತಿ ದೇವಾಲಯಗಳು. ಕೋಟೆಬೆಟ್ಟದ ಲಕ್ಷೀನಾರಾಯಣನ

ದೇವಾಲಯ.ದೇವಿಕುಂಟೆ ಕೋಟೆಯಲ್ಲಿನ ಅಕ್ಕಯಮ್ಮಗುಡಿ,ನರಸಿಂಹಗುಡಿ ಹಾಗು ವೀರಗಲ್ಲುಗಳು. ಚಿಂತಾಮಣಿ ಬಳಿ ಇರುವ ರೆಹಮಾನಗಡ ಕೋಟೆಯಲ್ಲಿನ ವಿಷ್ಣು ದೇವಾಲಯ, ಅಂಬಾಜಿದುರ್ಗದ ಈಶ್ವರನ ದೇವಾಲಯ. ಗೋಪಿನಾಥ ಬೆಟ್ಟದ ವೈಷ್ಣವ ದೇವಾಲಯಗಳು ಪಾಳೆಯಗಾರರ ಕಾಲದಲ್ಲಿ ನೀರ್ಮಾಣವಾಗಿದ್ದು ಕಲೆ ಮತ್ತು ವಾಸ್ತುಶಿಲ್ಪಕೆ ಅದ್ಬುತ ಕೊಡುಗೆಯಾಗಿದೆ.

**ಅಡಿಟಿಪ್ಪಣಿಗಳು;**

**(೧)ನರಸಿಂಹನ್.ಕೆ.ಅರ್." ಕೋಲಾರಜಿಲ್ಲೆಯ ಶ್ರೀವೆಂಕಟೇಶ್ವರ ಸ್ವಾಮಿ ಮತ್ತು ಇತರೆ ದೇವಾಲಯಗಳು"** ಕೋಲಾರ ಪತ್ರಿಕೆ ಪ್ರಕಾಶನ .ಕೋಲಾರ.೧೯೮೫. ಪುಟ;೩೧

(೧ಬಿ) ಎಚ್.ಚಿತ್ತರಂಜನ್.' **ಭಾರತದ ಗ್ಯಾಸೆಟಿಯರ್.ಕರ್ನಾಟಕ ರಾಜ್ಯ,ಕೋಲಾರ ಜಿಲ್ಲೆ' ಕರ್ನಾಟಕ ಸರ್ಕಾರ. ಬೆಂಗಳೂರು.೨೦೦೫** ಪುಟ–೮೪೨.

(೨) ಮೇಲಿನದೆ .(೩) ಅದೇ.ಪುಟ;೮೪೩. (೪) ಅದೇ ಪುಟ;೮೪೪.(೫) ಅದೇ ಪುಟ;೮೫೧.(೬) ಅದೇ.ಪುಟ;೮೬೬. (೭) ಅದೇ ಪುಟ;೮೬೮. (೮)ಅದೇ ಪುಟ;೮೭೦ (೯)ಆದೆ ಪುಟ; ೮೭೭. (೧೦) ಅದೇ,ಪುಟ;೮೮೦. (೧೧) ಅದೇ.ಪುಟ;೮೮೧.

(೧೧ಎ).ಗೋಪಾಲಗೌಡಕಲ್ವಮಂಜಲಿ.**"ನಂದಿ ಮತ್ತುರಂಗಸ್ಥಳ."**ಅಖಿಲ ಭಾರತ ಮುಂಡಾಲ ಸಮಾಜ.ಬೆಂಗಳೂರು,೨೦೧೨.ಪುಟ;೧೩. (೧೨)ಎಚ್,ಚಿತ್ತರಂಜನ್. ಅದೇ'ಪುಟ;೮೮೪.(೧೨ಎ)ನರಸಿಂಹನ್.ಕೆ.ಅರ್.ಮೇಲಿನದೆ.ಪುಟ;೩೨. (೧೩) ಅದೇ,ಪುಟ;೮೮೫. (೧೪) ಆದೇ.ಪುಟ'೮೯೪ (೧೫) ಅದೇ ಪುಟ'೮೯೮. (೧೬) ಅದೇ.ಪುಟ.೯೧೧.

(೧೬ಎ).ವೆಂಕಟರಮಣ್ಣ.ಬಿ." ವಿಜಯನಗರ ಇತಿಹಾಸಕ್ಕೆ ಕೋಲಾರ ಜಿಲ್ಲೆಯ ಕೊಡುಗೆ" ಸಿಂಚು ಮಲ್ಟಗ್ರಾಫ್. ಮೈಸೂರು.೨೦೧೦.ಪುಟ;೩೪೦.(೧೭) ಅದೇ.ಪುಟ;೯೧೬.

(೧೮)ಬಿಟ್ಟಸಂದ್ರ ಗುರುಸಿದ್ದಯ್ಯ.ಬಿ.ಜಿ. **"ದೇವನದೊಡ್ಡಿಯಿಂದ ದೇವನಹಳ್ಳಿಯವರೆಗೆ ಹೆಜ್ಜೆಗುರುತು"** ಸ್ವಾತಿ ಪ್ರಕಾಶನ. ದೇವನಹಳ್ಳಿ. ೨೦೧೫.ಪುಟ;೩.೪.(೧೯) ಮೇಲಿನದೆ ಪುಟ–೯.

(೨೦).ಭುವನಹಳ್ಳಿ ಚನ್ನಪ್ಪ.;**"ಆವತಿ ಶ್ರೀ ಗೌತಮಗಿರಿ ಕ್ಷೇತ್ರ ಪರಿಚಯ",**ಶ್ರೀ ತಿಮ್ಮರಾಯಸ್ವಾಮಿ ದೇವಾಲಯದ ಕಾರ್ಯಕಾರಿ ಸಮಿತಿ'ಆವತಿ ೧೯೮೭–೮೮.ಪುಟ;೨೩,೨೫.

(೨೧)**ಕನ್ನಡ ವಿಷಯ ವಿಶ್ವಕೋಶ,೨೦೦೫.**'ಇತಿಹಾಸ ಮತ್ತು ಪುರಾತತ್ವ".ಪುಟ;೯೭೯.ಕುವೆಂಪು ಕನ್ನಡ ಅಧ್ಯಯನ ಸಂಸ್ಥ,ಮೈಸೂರು.

(೨೨) ಎಸ್,ವೆಂಕಟೇಶ."**ದೊಡ್ಡಬಳ್ಳಾಪುರ ಚಾರಿತ್ರಿಕ ಅದ್ಯಯನ"** ದೃಶ್ಯ ಪ್ರಕಾಶನ ,ದೊಡ್ಡಬಳ್ಳಾಪುರ,೨೦೧೬.ಪುಟ'೧೬೯.,

(೨೩)ಪಿ.ವಿ.ಕೃಷ್ಣಮೂರ್ತಿ."**ಸುಗುಟೂರು ವೀರಶೈವ ಅರಸು ಮನೆತನ"**.ಕನ್ನಡ ಅಧ್ಯಾಯನ ಪೀಠ. ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ. ೧೯೯೪.ಪುಟ.೪೫ ರಿಂದ೪೯.

(೨೪)ಪರಶಿವ ಮೂರ್ತಿ.ಡಿ.ವಿ." ಸಂ."ಕರ್ನಾಟಕ ಲೋಚನ".ಬಿಎಂಶ್ರೀ ಸ್ಮಾರಕ ಪ್ರತಿಷ್ಠನ .ಬೆಂಗಳೂರು.೧೯೯೨. ಪುಟ; ೬೫–೬೮..